# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:– ಸರ್ಕಾರದ ಅನುದಾನಿತ ಖಾಸಗಿ ಪ್ರಾಥಮಿಕ, ಪ್ರೌಢ, ಮತ್ತು ಪದವಿ ಪೂರ್ವ ಕಾಲೇಜುಗಳ ಬೋಧಕ ಸಿಬ್ಬಂದಿ ನೇಮಕಾತಿಗೆ ಅನುಮೋದನೆ ಮಾಡುವ ಅಧಿಕಾರ ಪ್ರತ್ಯಾಯ ಯೋಜನೆಯನ್ನು ಹಿಂತೆಗೆದು ಕೊಳ್ಳುವ ಬಗ್ಗೆ.

**ಓದಲಾಗಿದೆ:– ದಿನಾಂಕ: 31–01–1995 ರ ಸರ್ಕಾರದ ಆದೇಶ ಸಂಖ್ಯೆ: ಇಡಿ450 ಎಸ್‌ಇಪಿ 92.**

**ಪ್ರಸ್ತಾವನೆ:–**

ಮೇಲೆ ಓದಲಾಗಿರುವ ಸರ್ಕಾರದ ಆದೇಶದಲ್ಲಿ ಸರ್ಕಾರದ ಅನುದಾನಿತ ಖಾಸಗಿ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿನ ಅನುದಾನಿತ ಹುದ್ದೆಗಳಿಗೆ ಬೋಧಕ ಸಿಬ್ಬಂದಿಯ ನೇಮಕಾತಿಯನ್ನು ಅನುಮೋದಿಸುವ ಅಧಿಕಾರಕ್ಕೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಸೂಚಿಸಿದ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರಕ್ಕೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯಿಂದ ಯಾವುದೇ ರೀತಿಯ ಸಹಮತಿ ನೀಡಿರುವುದಿಲ್ಲ. ಅಂತೆಯೇ ಸಹಾಯಾನುದಾನಿತ ವಿಷಯದಲ್ಲಿ ಅಧಿಕಾರ ಪ್ರತ್ಯಾಯೋಜನೆಯು ಆರ್ಥಿಕ ಪರಿಸ್ಥಿತಿಯ ಮೇಲೆ ಪರಿಣಾಮ ಬೀರುವುದರಿಂದ ಸದರಿ ಅಧಿಕಾರವನ್ನು ಸರ್ಕಾರದಲ್ಲಿಯೇ ಉಳಿಸಿಕೊಳ್ಳ ಬೇಕಾಗಿರುತ್ತದೆ. ಆದ ಕಾರಣ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶದ ಸಂಖ್ಯೆ: ಎಫ್.ಡಿ.2 ಟಿಎಫ್‌ಪಿ 2004. ಬೆಂಗಳೂರು, ದಿನಾಂಕ: 17–01–2004.**

ಸರ್ಕಾರದ ಅನುದಾನಿತ ಖಾಸಗಿ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿನ ಅನುದಾನಿತ ಹುದ್ದೆಗಳಿಗೆ ಬೋಧಕ ಸಿಬ್ಬಂದಿಯ ನೇಮಕಾತಿಯನ್ನು ಅನುಮೋದಿಸುವ ಅಧಿಕಾರಕ್ಕೆ ಸಂಬಂಧಿಸಿದಂತೆ ದಿನಾಂಕ: 31–01–95 ರ ಇಡಿ 150 ಎಸ್.ಇ.ಪಿ. 92. ಕ್ರಮಾಂಕದ ಆದೇಶದಲ್ಲಿ ಅಧಿಕಾರಿಗಳಿಗೆ ಪ್ರತ್ಯಾ ಯೋಜಿಸಲಾಗಿದ್ದ ಅಧಿಕಾರವನ್ನು ಮತ್ತು ತತ್ಸಂಬಂಧ ಇತರ ಯಾವುದೇ ಪ್ರತ್ಯಾ ಯೋಜಿತ ಅಧಿಕಾರಿಗಳು ಚಾಲ್ತಿಯಲ್ಲಿದ್ದಾಗ್ಯೂ ಕೂಡ ಈ ಎಲ್ಲಾ ಪ್ರತ್ಯಾ ಯೋಜಿತ ಅಧಿಕಾರಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂತೆದುಕೊಳ್ಳಲಾಗಿದೆ. ಅಲ್ಲದೇ ಇನ್ನು ಮುಂದೆ ಸದರಿ ನಿಯಮ/ ಆದೇಶಗಳ ಯಾವುದೇ ನೇಮಕಾತಿ ಮಾಡುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**
**ಸಹಿ/–**
**(ಆರ್. ಸೂರಿ ಬಾಬು),**
**ಸರ್ಕಾರದ ಅಧೀನ ಕಾರ್ಯದರ್ಶಿ,**
**ಆರ್ಥಿಕ ಇಲಾಖೆ (ಆರ್ಥಿಕ ನಿಯಮಗಳು).**

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರವರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–1.**

ಸಂಖ್ಯೆ: ಸಿ8(8) ಶಾ.ಶಿ.ಅ. ನೇ. ಅನು. 05/2003–2004. ದಿನಾಂಕ: 24–01–2004.

ಸರ್ಕಾರದ ಆದೇಶ ಸಂಖ್ಯೆ ಎಫ್.ಡಿ.2 ಟಿ.ಎಫ್.ಪಿ. 2004. ದಿನಾಂಕ: 17–01–2004 ರ ಆದೇಶದಲ್ಲಿ ಆದೇಶಿರುವ ರೀತ್ಯಾ ಖಾಸಗಿ ಅನುದಾನಿತ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿನ

ನೇಮಕಾತಿಗಳನ್ನು ದಿನಾಂಕ: 17–01–2004 ರಿಂದ ಜಾರಿಗೆ ಬರುವಂತೆ ನೇಮಕಾತಿಗಳನ್ನು ಅನುಮೋದಿಸಬಾರದೆಂದು ಈ ಮೂಲಕ ನೇಮಕಾತಿ ಪ್ರಾಧಿಕಾರಿಗಳಿಗೆ ತಿಳಿಸಿದೆ.

24/1

ನಿರ್ದೇಶಕರು (ಪ್ರೌಢ ಶಿಕ್ಷಣ)

**ಪ್ರತಿಗಳು:–**

1. ರಾಜ್ಯದ ಎಲ್ಲಾ ಸಹ ನಿರ್ದೇಶಕರುಗಳಿಗೆ.
2. ರಾಜ್ಯದ ಎಲ್ಲಾ ಉಪ ನಿರ್ದೇಶಕರುಗಳು ಆದೇಶವನ್ನು ಪಾಲಿಸುವುದು.
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
4. ಮಾನ್ಯ ಆಯುಕ್ತರ ಆಪ್ತ ಶಾಖೆಗೆ ಮಾಹಿತಿಗಾಗಿ.
5. ಮಾನ್ಯ ನಿರ್ದೇಶಕರು (ಪ್ರೌಢ ಶಿಕ್ಷಣ).
6. ಮಾನ್ಯ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ).
7. ಕಛೇರಿ ಪ್ರತಿ.

N.P.M. **\\Type6\d\Est 2\18421_03.doc**